## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 75 |
| **ಸದಸ್ಯರ ಹೆಸರು** | ಶ್ರೀಮತಿ ಹೇಮಲತಾ ನಾಯಕ |
| **ಉತ್ತರಿಸಬೇಕಾದ ದಿನಾಂಕ** | 27.01.2025 |
| **ಉತ್ತರಿಸುವ ಸಚಿವರು** | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2024-25 ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಅಕ್ರಮ, ಮರಳು ಸಾಗಾಣಿಕೆ ಪ್ರಕರಣಗಳು, ಅನಧಿಕೃತ ಗಣಿಗಾರಿಕೆ ಮತ್ತು ಖನಿಜ ಸಾಗಾಣೆ ಕುರಿತು ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ಎಷ್ಟು ದಂಡ ಸಂಗ್ರಹಿಸಲಾಗಿದೆ;</td><td rowspan="3">ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಡಿ 2024-2025ನೇ ಸಾಲಿನಿಂದ ಇಲ್ಲಿಯವರೆಗೆ ಪತ್ತೆ ಹಚ್ಚಿದ ಪ್ರಕರಣಗಳು, ಸಂಗ್ರಹಿಸಲಾದ ದಂಡದ ಮೊತ್ತ ಮತ್ತು ದಾಖಲಿಸಿದ ಮೊಕದ್ದಮೆಗಳ ವಿವರಗಳು ಈ ಕೆಳಗಿನಂತಿವೆ:-
<table>
<tr><th>ಕ್ರ. ಸಂ.</th><th>ವರ್ಷ</th><th>ಪತ್ತೆಹಚ್ಚಿರುವ ಪ್ರಕರಣಗಳು</th><th>ದಾಖಲಿಸಿರುವ ಪ್ರಕರಣಗಳ ಸಂಖ್ಯೆ</th><th>ದಂಡದ ಮೊತ್ತ</th></tr>
<tr><td colspan="5">ಅನಧಿಕೃತ ಮರಳು ಗಣಿಗಾರಿಕೆ</td></tr>
<tr><td>1</td><td>2024-25</td><td>11</td><td>8</td><td>6.28</td></tr>
<tr><td>2</td><td>2025-26</td><td>22</td><td>18</td><td>34.89</td></tr>
<tr><td colspan="2">ಒಟ್ಟು</td><td>33</td><td>26</td><td>41.17</td></tr>
<tr><td colspan="5">ಅನಧಿಕೃತ ಮರಳು ಸಾಗಾಣಿಕೆ</td></tr>
<tr><td>1</td><td>2024-25</td><td>149</td><td>35</td><td>31.51</td></tr>
<tr><td>2</td><td>2025-26</td><td>118</td><td>5</td><td>41.15</td></tr>
<tr><td colspan="2">ಒಟ್ಟು</td><td>267</td><td>40</td><td>72.66</td></tr>
</table>
<ul>
<li>ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿದೆ.</li>
<li>ಸದರಿ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿದ್ದು, ಈ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ-1957ರ ಕಲಂ 4(1), 4(1-A)</li>
</ul></td></tr>
<tr><td>ಆ)</td><td>ಅಕ್ರಮ ಮರಳು ಸಾಗಾಣಿಕೆ ಹಾಗೂ ಅಕ್ರಮ ಗಣಿಗಾರಿಕೆಯಲ್ಲಿ ಪಾಲ್ಗೊಂಡವರ ವಿರುದ್ಧ ಕೈಗೊಂಡಿರುವ ಕ್ರಮಗಳು ಯಾವುವು;</td></tr>
<tr><td>ಇ)</td><td>ಇಂತಹ ಅಕ್ರಮಗಳಲ್ಲಿ ಪೋಲಿಸ್ ಇಲಾಖೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಶಾಮೀಲಾಗಿ ವರದಿಯಾಗಿರುವ ಪ್ರಕರಣಗಳು ಎಷ್ಟು ಹಾಗೂ ಅವರ ವಿರುದ್ಧ ಯಾವ ರೀತಿಯ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. (ವಿವರ ಒದಗಿಸುವುದು)</td></tr>
</table>

| | | |
|---|---|---|
| | | ಮತ್ತು ಕಲಂ 21 ಮತ್ತು 22 ರಡಿ ಹಾಗೂ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-31-Rರ ಉಪ ನಿಯಮ-12 ರಂತೆ ಕ್ರಮ ವಹಿಸಲು ಅಧಿಕಾರ ಪ್ರತ್ಯೋಜಿಸಲಾಗಿದೆ.<br><br>• ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಮರಳು ಸಮಿತಿಯಿಂದ ತಾಲ್ಲೂಕುವಾರು ಚಾಲಿತದಳ ತಂಡ ರಚಿಸಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ.<br><br>• ಕೊಪ್ಪಳ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಲ್ಲಿ ಪೊಲೀಸ್ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಶಾಮೀಲಾಗಿರುವ ಬಗ್ಗೆ ಯಾವುದೇ ಪ್ರಕರಣಗಳಿರುವುದಿಲ್ಲ. |

ಸಂಖ್ಯೆ:ಸಿಐ-ಎಂಎಂಎನ್/29/2026

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.